2) ಪ್ರವಾಸೋದ್ಯಮ ಇಲಾಖೆಯು ಈವರೆವಿಗೆ ರಾಜ್ಯದ 210 ಕ್ಷೇತ್ರಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸಲು ಗುರುತಿಸಿರುತ್ತದೆ. ಇವುಗಳಲ್ಲಿ ಶಿವಗಂಗೆ ಕ್ಷೇತ್ರವು ಸೇರಿರುತ್ತದೆ. ಆರ್ಥಿಕ ಸಂಪನ್ಮೂಲಗಳು ಲಭ್ಯವಾದಂತೆ ಇವುಗಳನ್ನು ಅಭಿವೃದ್ಧಿಪಡಿಸಲಾಗುವುದು.

ಗಡಿ ಪ್ರದೇಶದಲ್ಲಿ ಜನಗಣತಿ ಕಾಲಕ್ಕೆ ಗಡಿ ಭಾಗದಲ್ಲಿರುವ ಕನ್ನಡಿಗರಿಗೆ ಮಾರಾಠಿಗಳಿಂದ ಹಿಂಸೆ

278 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕಕ್ಕೆ ಸೇರುವ ಉದ್ದೇಶ ಹೊಂದಿದ ಅಕ್ಕಲಕೋಟೆ ,ಚಾಜಾ ಮಂಗಳಕೇಡಿ ದಕ್ಷಿಣ ಸೊಲ್ಲಾಪುರ ಗಡಹಿಂಗ್ಲಜ, ಮುಂತಾದ ಗ್ರಾಮ ಪಂಚಾಯತಿ ಪ್ರದೇಶದ ಜನರಿಗೆ ಮಹಾರಾಷ್ಟ್ರದ ಅಧಿಕಾರಿಗಳು ತೊಂದರೆ ಕೊಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಗಡಿ ಭಾಗದಲ್ಲಿ ವಾಸಿಸುತ್ತಿರುವ ಜನರಿಗೆ ವಾಕ್ ಸ್ವಾತಂತ್ರ್ಯವಿಲ್ಲ, ಭಾಷಾ ಸ್ವಾತಂತ್ರ್ಯವಿಲ್ಲ, ಪ್ರಚಾರ ಸ್ವಾತಂತ್ರ್ಯವಿಲ್ಲ, ಹಾಗೂ ಮಹಾರಾಷ್ಟ್ರ ಸರ್ಕಾರದ ಅಧಿಕಾರಿಗಳು ಹಾಗೂ ಶಿವಸೇನಿಯರು ಮರಾಠಿ ಮಹಾ ಸಂಘದವರು ಗಡಿ ಪ್ರದೇಶದ ಜನರು ಕನ್ನಡ ಮಾತನಾಡಬಾರದೆಂದು ಹೆದರಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ,*

ಇ) *ಅದೂ ಅಲ್ಲದೆ ಈ ಮೇಲೆ ಹೇಳಿರುವ ಜನರು ಜನಗಣತಿಯಲ್ಲಿ ಕನ್ನಡಿಗರು (ಕನ್ನಡಿಗ) ಎಂದು ಬರೆಯಿಸಬಾರದೆಂದು ಹೆದರಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ದಿನಾಂಕ 10-2-91 ರಂದು ಗಡಿ ಭಾಗದಲ್ಲಿರುವ ಕನ್ನಡಿಗರಿಗೆ ಹಿಂಸೆ ಆಗುತ್ತಿರುವ ವಿಷಯ ಪ್ರಕಟಣೆಗೊಂಡಿದ್ದರೂ ಕೂಡ ಸರ್ಕಾರದವರು ಇದರ ಬಗ್ಗೆ ಯಾವ ಕ್ರಮವನ್ನು ಕೈಗೊಂಡಿಲ್ಲವೇಕೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ.ವಿ. ರಾಮಚಂದ್ರಪ್ಪ ಅಂಡ್ ಸನ್ಸ್ ಮೆಟಲ್ ಮರ್ಚಂಟ್ಸ್ ಇವರ ಮಾರಾಟ ತೆರಿಗೆ ಬಗ್ಗೆ

1093 - ಶ್ರೀ ಪಿ.ಸಿ. ಸಿದ್ದಣ್ಣ ಗೌಡರ್ (ಕಲಘಟಗಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶ್ರೀ ಬಿ.ವಿ. ರಾಮಚಂದ್ರಪ್ಪ ಅಂಡ್ ಸನ್ಸ್, ಮೆಟಲ್ ಮರ್ಚೆಂಟ್ಸ್, ಬಿ.ವಿ ರಾಮಚಂದ್ರಪ್ಪ ಅಂಡ್ ಕಂಪನಿ ಇವರು 1987-88, 88-89, 89-90 ಮತ್ತು 90-91 ಸಾಲಿಗೆ ಸಂದಾಯ ಮಾಡಿರುವ ಮಾರಾಟ ತೆರಿಗೆ ಮೊತ್ತವೆಷ್ಟು,*

ಆ) *ಈ ಸಂಸ್ಥೆಯು ಮೇಲ್ಕಂಡ ವರ್ಷಗಳಲ್ಲಿ ಮಾರಾಟ ತೆರಿಗೆ ಪಾವತಿ ತಪ್ಪಿಸುವುದರಲ್ಲಿ ನಿರತವಾಗಿದೆಯೇ*